ಆಧಾರದ ಮೇಲೆ ಈ ಸದನದಲ್ಲಿ ಈ ವಿಚಾರವನ್ನು ಮತಕ್ಕೆ ಹಾಕಿ ಎಂದು ನಾನು ಹೇಳಿದೆ. ಈ ಸರ್ಕಾರಗಳು ರೈತನಿಗೆ ಮೋಸ ಮಾಡಿವೆ, ಆದುದರಿಂದ ಅವನ ಸಾಲ ರದ್ದಾಗಬೇಕಾಗುತ್ತದೆ. ಸರ್ಕಾರಗಳು ರೈತನ ಋಣದಲ್ಲಿವೆ, ಆದಕ್ಕಾಗಿ ನಿಮಗೆ ಧೈರ್ಯ ಇದ್ದರೆ ಆ ವಿಷಯವನ್ನು ಮತಕ್ಕೆ ಹಾಕಿ ಮತ್ತೆ ಏನೂ ಚರ್ಚೆ ಬೇಡ, ನಾನು ಈ ಸದನದಲ್ಲಿ ಆ ವಿಷಯವನ್ನು ಚರ್ಚೆ ಮಾಡುವುದಿಲ್ಲ.

ಅಧ್ಯಕ್ಷರು:- ಚರ್ಚೆ ಬೇಡ ಅಂದರೆ ಸರಿ ಬಿಡಿ, ಈಗ ನಿಲುವಳಿ ಸೂಚನೆ.....

ಶ್ರೀ ಬಿ.ಎಸ್. ಯಡಿಯೂರಪ್ಪ:- ಸದನದ ಕಲಾಪಗಳಿಗೆ ಅಡ್ಡಿ ಮಾಡಲು ನಾನು ಇಷ್ಟಪಡುವುದಿಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಪ್ರೊಫೆಸರ್ ನಂಜುಂಡಸ್ವಾಮಿ ಅವರು ನಮ್ಮ ರಾಷ್ಟ್ರೀಯ ರಂಗದ್ದು ಕುತಂತ್ರ ಪ್ರಣಾಳಿಕೆ ಒಪ್ಪಿಕೊಂಡಿದ್ದು ಕುತಂತ್ರ ಎಂದು ಹೇಳಿದ್ದಾರೆ ಅದು ಅವರ ವೈಯಕ್ತಿಕ ಅಭಿಪ್ರಾಯ, ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. ಆದರೆ ಆ ಅಭಿಪ್ರಾಯಕ್ಕೆ ನನ್ನ ಮತ ಇಲ್ಲ. ನಮ್ಮದು ಕುತಂತ್ರ ಇರಲಿಲ್ಲ. ಬಹುಶಃ ಆ ಕಾರಣಕ್ಕಾಗಿ ರಾಷ್ಟ್ರೀಯ ರಂಗದ ಸರ್ಕಾರಕ್ಕೆ ಸಹ ಇಡೀ ದೇಶದ ಜನ ಮತ ಕೊಟ್ಟಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸದನದ ಸಮಯವನ್ನು ಹಾಳು ಮಾಡಲು ನಾನು ಇಷ್ಟಪಡುವುದಿಲ್ಲ. ಈಗಲಾದರೂ ಸದನದ ಸಮಿತಿಯನ್ನು ಮಾಡಿ. ರೈತರ ಸಾಲ ವಸೂಲಾತಿಗೆ ತಡೆ ಆಜ್ಞೆ ಕೊಡಿ.....

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಸದನದ ಸಮಿತಿ ಬೇಡ.

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೊಸ ಯೋಜನೆಯನ್ನು ತೆಗೆದುಕೊಂಡು 10 ಸಾವಿರದೊಳಗೆ ಇರುವ ರೈತರ ಸಾಲ ಮನ್ನಾ ಮಾಡುವಂತಹ ಒಂದು ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ ಇಲ್ಲದಿದ್ದರೆ ಈ ಸರ್ಕಾರಕ್ಕೆ ರೈತರ ಸಮಸ್ಯೆ ಬಗ್ಗೆ ಕಳಕಳಿ ಇಲ್ಲ ಎಂದು ಹೇಳಿ, ಸರ್ಕಾರದ ಈ ನೀತಿಯನ್ನು ಪ್ರತಿಭಟನೆ ಮಾಡಿ ಹೊರಗೆ ಹೋಗುತ್ತೇನೆ. ರೈತರ ಸಮಸ್ಯೆಯನ್ನು ನಿವಾರಣೆ ಮಾಡಲು ಸಾಧ್ಯ ಇಲ್ಲ ಎಂದರೆ ಈ ಸರ್ಕಾರ ಶಾಪಕ್ಕೆ ಗುರಿ ಆಗುತ್ತದೆ. ಈ ಸರ್ಕಾರದ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾನು ಸದನದಿಂದ ಹೊರಗಡೆ ಹೋಗುತ್ತೇನೆ

(ಮಾನ್ಯ ಸದಸ್ಯರಾದ ಶ್ರೀ ಯಡಿಯೂರಪ್ಪನವರು ತಮ್ಮ ಪಕ್ಷದ ಸದಸ್ಯರೊಂದಿಗೆ ಸಭಾತ್ಯಾಗ ಮಾಡಿದರು)

(ಗೊಂದಲ)

ಒಬ್ಬ ಮಾನ್ಯ ಸದಸ್ಯರು:- ಬಿಜೆಪಿ ಸದಸ್ಯರಿಗೆ ಮಾತ್ರ ರೈತರ ಬಗ್ಗೆ ಕಾಳಜಿ ಇರುವುದು...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಒಂದು ನಿಯೋಗವನ್ನು ಕೇಂದ್ರಕ್ಕೆ ತೆಗೆದುಕೊಂಡು ಹೋಗಬಹುದಿತ್ತು. ಇದು ಬಹಳ ಸಣ್ಣ ವಿಷಯ ಅಂತಹ ದೊಡ್ಡದು ಏನಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇವ್ರೊತ್ತು ಮಾನ್ಯ ಮುಖ್ಯಮಂತ್ರಿಗಳ ಮಾತಿನ ಸರಣಿ, ವಾದದ ಸರಣಿ ನೋಡಿದರೆ ಅವರು ಬಹಳ ಸಿಟ್ಟಿನಿಂದ ಇದ್ದಹಾಗೆ ಕಾಣುತ್ತದೆ...

ಅಧ್ಯಕ್ಷರು:- ಸಿಟ್ಟೂ ಇಲ್ಲ ಎಂಥಾದ್ದು ಇಲ್ಲ. ಇವತ್ತು ನೀವು ಸಿಟ್ಟು ಮಾಡಿಕೊಂಡ ಹಾಗೆ ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್:- ನಾವು ದಿನಾ ನೋಡುತ್ತಿದ್ದೇವೆ. ಇದು ಸರಿಯಾದ ನೀತಿ ಅಲ್ಲ ಎಂದು ನಾನೂ ಸಹ ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)